ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):

ಅ) ಎ.ಡಿ.ಬಿ. ನೆರವಿನ "ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ" (ಎನ್.ಕೆ.ಯು.ಎಸ್.ಐ.ಪಿ.) ದಡಿ ಸಿಂಧನೂರಿನಲ್ಲಿ ಯು.ಜಿ.ಡಿ. ಯೋಜನೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಇರುತ್ತದೆ. ಇದಕ್ಕಾಗಿ ರೂ. 17.95 ಕೋಟಿಗಳನ್ನು ನಿಗದಿಪಡಿಸಲಾಗಿರುತ್ತದೆ.

ಆ) ಎ.ಡಿ.ಬಿ. ನೆರವಿನ ಎನ್.ಕೆ.ಯು.ಎಸ್.ಐ.ಪಿ.ಯಡಿ ಸಿಂಧನೂರು ನಗರ ಸಭೆ ವ್ಯಾಪ್ತಿಯಲ್ಲಿ ಆಯೋಜಿಸಲಾಗಿರುವ ಒಳಚರಂಡಿ ಕಾಮಗಾರಿಗೆ ವಿಸ್ಕೃತ ಯೋಜನಾ ವರದಿ ತಯಾರಿಕೆಯ ಅಂತಿಮ ಹಂತದಲ್ಲಿದೆ. ಈ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳು ಕೆಳಗಿನಂತಿದೆ:

1) ಒಳಚರಂಡಿ ಜಾಲ – 111 ಕಿ.ಮೀ

2) ರೈಜಿಂಗ್ ಮೈನ್ – 11 ಕಿ.ಮೀ

3) ತ್ಯಾಜ್ಯ ನೀರು ಸಂಸ್ಕರಣಾ ಘಟಕ – 12 ಎಂ.ಎಲ್.ಡಿ. (ಎಫ್.ಎ.ಎಲ್.)

4) ಪಂಪಿಂಗ್ ಮತ್ತು ವಿದ್ಯುತ್ ಉಪಕರಣಗಳು

ಇ) ಈ ಯೋಜನೆಯನ್ನು ಮೂರನೇ ಟ್ರ್ಯಾಂಚ್‌ನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, 2011ರಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಈ) ಎ.ಡಿ.ಬಿ. ನೆರವಿನ ಎನ್.ಕೆ.ಯು.ಎಸ್.ಐ.ಪಿ. "ಮಲ್ಟಿ ಟ್ರ್ಯಾಂಚ್" ಸಾಲದ ಯೋಜನೆಯಾಗಿದೆ. ಈ ಒಳಚರಂಡಿ ಕಾಮಗಾರಿಯನ್ನು ಮೂರನೇ ಟ್ರ್ಯಾಂಚ್‌ನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಮೂರನೇ ಟ್ರ್ಯಾಂಚ್‌ನ ಸಾಲದ ಮಾತುಕತೆ ಹಾಗೂ ಎ.ಡಿ.ಬಿ. ಅನುಮೋದನೆ 2011 ರಲ್ಲಿ ಆಗುವ ಸಾಧ್ಯತೆಯಿದೆ. ಈ ಕಾಮಗಾರಿ ಒಳಗೊಂಡಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಭೂ ಲಭ್ಯತೆಯಿಲ್ಲವಾಗಿದ್ದ ಕಾರಣ ಎರಡನೇ ಟ್ರ್ಯಾಂಚ್‌ನಲ್ಲಿ ಕೈಗೆತ್ತಿಕೊಳ್ಳಲಾಗಿರುವುದಿಲ್ಲ. ಭೂ ಖರೀದಿ ಪ್ರಕ್ರಿಯೆ ನಡೆಯುತ್ತಿರುತ್ತದೆ.

ಅದಲ್ಲದೆ, ಯಾವುದೇ ಯಶಸ್ವಿ ಒಳಚರಂಡಿ ವ್ಯವಸ್ಥೆಗಾಗಿ ಸಾಕಷ್ಟು ನೀರು ಸರಬರಾಜು ಅವಶ್ಯವಿದೆ. ಸಿಂಧನೂರಿನಲ್ಲಿ ನೀರು ಸರಬರಾಜು ಯೋಜನೆಯನ್ನು 3ನೇ ಟ್ರ್ಯಾಂಚಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ನೀರು ಸಂಗ್ರಹಗಾರಕ್ಕಾಗಿ ಅಗತ್ಯವಿರುವ 259.26 ಎಕರೆ ಭೂಲಭ್ಯತೆ ಇಲ್ಲವಾಗಿದ್ದ ಕಾರಣ 2ನೇ ಟ್ರ್ಯಾಂಚಿನಲ್ಲಿ ಕೈಗೆತ್ತಿಕೊಳ್ಳಲಾಗಿರುವುದಿಲ್ಲ ಹಾಗೂ ಇದು ಸಹ ಒಳ ಚರಂಡಿ ಯೋಜನೆ ವಿಳಂಬಕ್ಕೆ ಕಾರಣವಾಗಿರುತ್ತದೆ.

ಉ) ಹೌದು.

ಊ) ತ್ಯಾಜ್ಯ ನೀರು ಸಂಸ್ಕರಣಾ ಘಟಕ ಭೂ ಸ್ವಾಧೀನ ಪ್ರಕ್ರಿಯೆಗೆ ಸಮಯಾವಕಾಶ ಬೇಕಿದ್ದು ಹಾಗೂ ಈ ಯೋಜನೆಗೆ ಅವಶ್ಯವಿರುವ ನೀರು ಸರಬರಾಜು ಯೋಜನೆಯನ್ನು ಸಹ 3ನೇ ಟ್ರ್ಯಾಂಚ್‌ನಲ್ಲಿ ತೆಗೆದುಕೊಂಡಿರುವುದರಿಂದ, ಸದರಿ ಒಳಚರಂಡಿ ಯೋಜನೆಯನ್ನು 3ನೇ ಟ್ರ್ಯಾಂಚ್‌ನಲ್ಲಿ ಕೈಗೆತ್ತಿಕೊಳ್ಳುವುದು ಅನಿವಾರ್ಯವಾಗಿರುತ್ತದೆ.

ಋ) ಈ ಯೋಜನೆಯನ್ನು ಮೂರನೇ ಟ್ರ್ಯಾಂಚ್‌ನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, 2011ರಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಯೋಜನೆಯನ್ನು 18 ತಿಂಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಗೌರಿಬಿದನೂರು ಪಟ್ಟಣಕ್ಕೆ ಯು.ಜಿ.ಡಿ. ಅಳವಡಿಸುವುದು

173 (526) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ಪಟ್ಟಣಕ್ಕೆ ಯು.ಜಿ.ಡಿ. ಅಳವಡಿಸಲು ಸರ್ಕಾರದಿಂದ ಸುಮಾರು 25.00 ಕೋಟಿ ಅಂದಾಜು ವೆಚ್ಚ ತಯಾರು ಮಾಡಿದ್ದು ನಿಜವೇ;